have not started any work on this sanctioned scheme. This scheme is having 363 lakhs and 66.67% of this is being borne by the Central Government. Whether the State Government is not having any responsibility to start this? The Central Government has earmarked monies for Indian Medicine, particularly Unani. Rs. 5 lakhs were sanctioned and out of that 4.06 lakhs have been surrendered. Rs 47,000 have been given to Medical College of Bangalore University. If they have taken positive steps, certain things would have come out. Why this inordinate delay? Why don't you be responsible and establish this Unani Institute in Karnataka?

ಶ್ರೀ ಜಿ. ಎಸ್. ದೇಶಮುಖ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದಹಾಗೆ, ಕೇಂದ್ರ ಸರ್ಕಾರವನ್ನು ಆದಷ್ಟು ಬೇಗ ಸಂಪರ್ಕಿಸಿ, ಇನ್ನು ಎರಡುಮೂರು ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆಂದು ಈ ಸದನದಲ್ಲಿ ಆಶ್ವಾಸನೆ ಕೊಡುತ್ತೆ ನೆ.

ಶಿಕಾರಿಪುರ ತಾಲ್ಲೂಕಿನಲ್ಲಿ ಕಲ್ಲು–ಕೋರ್‌ನಿಂದ ಕಲ್ಲು ಸಾಗಾಣಿಕೆ

೧೮೭ (೪೭೭) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಶಿಕಾರಿಪುರ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯವರು ಈಗಾಗಲೇ ಮಂಜೂರಾಗಿದ್ದ "ಕಲ್ಲು ಕೋರ್" ನಿಂದ ಜಲ್ಲಿ ಕಲ್ಲು ತರುತ್ತಿದ್ದುದನ್ನು ಅರಣ್ಯ ಇಲಾಖೆಯವರು ತಡೆದಿರುವುದು ನಿಜವೆ?

ಆ) ಇದಕ್ಕಾಗಿ ಪರ್ಯಾಯ ವ್ಯವಸ್ಥೆಯನ್ನೇನಾದರೂ ಸರ್ಕಾರದವರು ಮಾಡಿದ್ದಾರೆಯೆ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಲೋಕೋಪಯೋಗಿ ಮಂತ್ರಿಗಳು).—

ಅ) ಹೌದು.

ಆ) ಕೇವು ಪದತ್ತಗಳನ್ನು ವಿಧಿಸಿ ಅರಣ್ಯ ಇಲಾಖೆಯು ಅನುಮತಿ ನೀಡಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಶಿಕಾರಿಪುರ ತಾಲ್ಲೂಕಿನಲ್ಲಿ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಿನಿಂದ ಈಗಾಗಲೇ ಕೆಲವು ಅಪ್ರೂವ್ಡ್ quarry ಅನುಮತಿ ಸಿಕ್ಕಿದಮೇಲೆ, ಶಿಕಾರಿಪುರ ತಾಲ್ಲೂಕು ಅರೆಗೊಪ್ಪ, ಹೊನ್ನಾಳಿ ತಾಲ್ಲೂಕಿನ ಜೋಗ್‌ನಿಂದ ರಸ್ತೆಗಳಿಗೆ ಕಲ್ಲು, ಜಲ್ಲಿ ತರುತ್ತಾ ಇದ್ದರು. ಅರಣ್ಯ ಇಲಾಖೆಯವರು ಉದ್ದೇಶಪೂರ್ವಕವಾಗಿ. ಮೈನ್ಸ್ ಅಂಡ್ ಜಿಯಾಲಜಿಯಿಂದ ಅಪ್ರೂವ್ ಆಗಿ ಈಗಾಗಲೇ ರಾಯಲ್ಟಿ ಕಟ್ಟಿ, ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರು ಜಲ್ಲಿ, ಕಲ್ಲು ತರುತ್ತಾ ಇದ್ದುದನ್ನು ತಡೆದು ಕಳೆದ ೪ ತಿಂಗಳಿಂದ ಶಿಕಾರಿಪುರ ತಾಲ್ಲೂಕಿನಲ್ಲಿ ಯಾವುದೇ ಡೆವಲಪ್‌ಮೆಂಟ್ ವರ್ಕ್ ಆಗದಂತೆ ನೋಡಿಕೊಂಡಿದ್ದಾರೆ. ಹತ್ತು ಬಾರಿ ನಿಮ್ಮ ಸೂಪರಿಂಟೆಂಡಿಂಗ್ ಎಂಜಿನಿಯರ್ ಮತ್ತು ಎಕ್ಸಿಕ್ಯುಟಿವ್ ಎಂಜಿನಿಯರ್‌ರವರನ್ನು ಭೇಟಿ ಮಾಡಿದೆ. ಮಾನ್ಯ ಮುಖ್ಯ ಮಂತ್ರಿಗಳು ಬಂದಾಗ ಭೇಟಿ ಮಾಡಿದೆ. ಇಡೀ ರಾಜ್ಯದಲ್ಲಿ ಈ ರೀತಿ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನಿಂದ ಅಪ್ರೂವ್ ಆದಂಥ ಕ್ವಾರಿಸ್‌ನಿಂದ ಜಲ್ಲಿ ಕಲ್ಲುಗಳನ್ನು ತರುವುದು ಇದ್ದರೂ ಸಹ, ಶಿಕಾರಿಪುರ ತಾಲ್ಲೂಕಿನಲ್ಲಿ ನಿಮ್ಮ ಅರಣ್ಯ ಅಧಿಕಾರಿಗಳು ಇದನ್ನು ತಡೆಯುತ್ತಿದ್ದಾರೆ. ಡೆವಲಪ್‌ಮೆಂಟ್ ವರ್ಕ್ಸ್ ಸ್ಥಗಿತವಾಗಿದೆ. ಇದಕ್ಕೆ ಕಾರಣ ಏನು? ಈ ಕ್ವಾರಿಗಳಿಂದ ೪೦–೫೦ ವರ್ಷಗಳ ಹಿಂದೆ ಕಟ್ಟಿದ ಅಂಬಳಿಗೋಳ ಮತ್ತು ಅಂಜನಾಪುರ ಜಲಾಶಯಗಳಿಗೂ ಸಹ ಇದೇ ಜಾಗದಿಂದ ಕಲ್ಲನ್ನು ಜಲ್ಲಿಯನ್ನು ತರುತ್ತಿದ್ದರು. ಅಲ್ಲಿ ಒಂದು ಚೂರೂ ಕಾಡು ಇಲ್ಲ. ಹೀಗಿದ್ದರೂ ತಡೆಯುತ್ತಿದ್ದಾರೆ. ಡೆವಲಪ್‌ಮೆಂಟ್ ವರ್ಕ್ಸ್ ಸ್ಥಗಿತವಾಗಿದೆ. ಇದರ ಬಗ್ಗೆ ಸರಕಾರ ಏನು ಕ್ರಮ ತೆಗೆದು ಕೊಂಡಿದೆ? ಇದಕ್ಕೆ ಪರಿಹಾರ ಏನು ಎಂದು ತಿಳಿಸಬೇಕು.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ. —ಸನ್ಮಾನ್ಯ ಅಧ್ಯಕ್ಷರೇ, ಶಿಕಾರಿಪುರ ತಾಲ್ಲೂಕು ಅಭಿವೃದ್ಧಿ ಕಾಮಗಾರಿಗಳಿಗೆ ಜಲ್ಲಿ ಮತ್ತು ಸೈಜ್ ಕಲ್ಲುಗಳನ್ನು ಕಾಮಟ್ಟು ಅರಣ್ಯ ಪ್ರದೇಶಗಳಲ್ಲಿರುವ ಕ್ವಾರಿಗಳಿಂದ ಪೂರೈಸಲಾಗುತ್ತಿದೆ. ಈ ಪ್ರದೇಶದ ಎಲ್ಲ ಕ್ವಾರಿಗಳೂ ೩೦-೪೦ ವರ್ಷಗಳ ಹಿಂದೆ ಲೀಸ್‌ಕೊಟ್ಟಿರುವುದಾಗಿದೆ. ಆದರೆ ನವೆಂಬರ್ ೧೯೭೮ರ ಅಂತ್ಯದ ಸರ್ಕಾರಿಗೆ ಅರಣ್ಯ ಇಲಾಖೆ ಯವರು ಈ ಕ್ವಾರಿಗಳಿಂದ ಜಲ್ಲಿಕಲ್ಲುಗಳನ್ನು ತೆಗೆಯಲು ಅವಕಾಶ ಕೊಡದೇ ತಡೆದಿದ್ದರು. ಈ ಬಗ್ಗೆ ಸಂಬಂಧಪಟ್ಟ ಅರಣ್ಯ ಇಲಾಖೆಯ ಅಧಿಕಾರಿಗಳನ್ನು, ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಆಗಾಗ್ಗೆ ಸಂಪರ್ಕಿಸಿ, ಇದರಿಂದ ಶಿಕಾರಿಪುರ ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವ ಪರಿಸ್ಥಿತಿಯನ್ನು ನಿವಾರಿಸಿ ಸಹಕರಿಸಲಾಗಿದೆ, ಪರಿಸ್ಥಿತಿಯ ಅರಣ್ಯ ಸಂರಕ್ಷಣಾಧಿಕಾರಿಗಳು ಕೆಲವು ಷರತ್ತುಗಳೊಂದಿಗೆ ಜಲ್ಲಿಕಲ್ಲುಗಳನ್ನು ಈ ಕ್ವಾರಿಗಳಿಂದ ಪಡೆಯಲು ೧೭-೧೦-೮೮ ರಿಂದ ಅನುಮತಿಯನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಸದಸ್ಯರೂ ಸಹ ಮುಖ್ಯಮಂತ್ರಿಗಳೊಂದಿಗೆ ಇದರ ಬಗ್ಗೆ ಚರ್ಚೆ ಮಾಡಿದಾಗ ಅರಣ್ಯ ಇಲಾಖಾ ಅಧಿಕಾರಿಗಳನ್ನು ಸಂಪರ್ಕಿಸಿ, ಈಗ ಆ ಎಲ್ಲಾ ಕ್ವಾರಿಗಳಿಂದ ಜಲ್ಲಿಕಲ್ಲುಗಳನ್ನು ಕಾಂಟ್ರಾಕ್ಟರ್ಸ್ ಮತ್ತು ಇಲಾಖೆಯವರು ತರುತ್ತಿದ್ದಾರೆ ಎಂದು ನಾನು ಸನ್ಮಾನ್ಯ ಸದಸ್ಯರಿಗೆ ಅರ್ಥವಾಗುವಂತೆ ಕೊಡುತ್ತೇನೆ.

ಶ್ರೀ ಬಿ.ಜಿ. ಮುಗಳಿ ಶ್ರೀ —ಮಾನ್ಯ ಅಧ್ಯಕ್ಷರೇ, ನನ್ನದೊಂದು ವಿನಂತಿ ಏಂದರೆ ಶ್ರೀಗಂಧದ ಕಳ್ಳಸಾಗಾಣಿಕೆಯನ್ನು ಅರಣ್ಯ ಅಧಿಕಾರಿಗಳು ತಡೆಯಲಿ. ನಾವು ಕಳ್ಳಸಾಗಾಣಿಕೆ ತಡೆಯಲಿ. ಮೈನ್ಸ್ ಆಂಡ್ ಜಿಯಾಲಜಿಯಿಂದ ಅಧ್ಯಾಪ್ ಆಗಿದ್ದಂಥ ಕ್ವಾರಿಗಳಿಂದ ಕಲ್ಲು ತರುವುದನ್ನು ತಡೆಯುವುದು ತಪ್ಪಲ್ಲವೇ? ಈಗ ಲಕ್ಷಾಂತರ ಖರ್ಚು ಮಾಡಿ ಆಂಡ್ರಾಡ್ ಲಾರ್ಜಾಟಿಕ್ ಮಾಡುತ್ತಿದ್ದೀವಿ. ಅದರಲ್ಲಿ ಸಾಕಷ್ಟು ಕಲ್ಲುಗುಡ್ಡಗಳಿವೆ. ಪ್ರೈವೇಟಾನವರನ್ನು ತಡೆಯುವುದರ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿಲ್ಲ. ಟಿಡಬ್ಲ್ಯೂಡಿ. ಲಿಸ್ಟಿಯನ್ನು ಸೀಜ್ ಮಾಡಿದ್ದಾರೆ ಎಂ.ಐ. ಲಿಸ್ಟಿಯನ್ನು ಸೀಜ್ ಮಾಡಿದ್ದಾರೆ. ನಾನು ಒಬ್ಬ ಶಾಸಕನಾಗಿ ಹೇಗೆ ಹೊರಬರಬೇಕೆಂಬ ಕೆಲಸ ಮಾಡಬೇಕಾಯಿತು. ಸೂರಿಟೆಂಡಿಂಗ್ ಇಂಜಿನಿಯರ್ ಹತ್ತಿರ, ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರ ಹತ್ತಿರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಪತ್ರ ವ್ಯವಹಾರ ಮಾಡಿದ್ದೇನೆ. ತಾಲ್ಲೂಕಾ ಪಂಚಾಯತ್ ಸಮಿತಿ ಸಭೆಗೆ ಅಧಿಕಾರಿಗಳನ್ನು ಕರೆದು ಅಭಿವೃದ್ಧಿ ಕೆಲಸಗಳಿಗೆ ತಡೆ ಮಾಡಬೇಡಿ ಎಂದು ಹೇಳಿದ್ದೇನೆ. ರಾಯಲ್ಟಿ ನಮ್ಮ ಅರಣ್ಯ ಇಲಾಖೆಗೆ ಬರಬೇಕೆಂದು ಹೇಳಿದರು. ಹಾಗಿದ್ದರೆ ಮೇಲಿನ ಅಧಿಕಾರಿಗಳ ಹತ್ತಿರ ಹೋಗಿ ಆರ್ಡರ್ ಮಾಡಿಸಿ, ಈಗ ಪಿಡಬ್ಲ್ಯೂಡಿ.ಯವರು ಏನು ರಾಯಲ್ಟಿ ಕೊಡುತ್ತಿದ್ದಾರೆ ಅದು ನಮಗೆ ಬರ ಬೇಕೆಂದು ಮಾಡಿಸಿ, ಈ ರೀತಿ ತಡೆ ಮಾಡಬೇಡಿ ಎಂದು ಹೇಳಿದೆ. ಶಿಕಾರಿಪುರ ತಾಲ್ಲೂಕಿಗ ಸೀಮಿತ ವಾಗಿ ನಾನು ಮಾತನಾಡುತ್ತಿಲ್ಲ. ಇನ್ನು ಮುಂದಾದರೂ ನಿಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳ ಮನಃಪರಿವರ್ತನೆ ಯಿಂದ ಆಗಬೇಕಾಗಿದೆ. ಅವರಿಗೆ ಮಾಡುವುದಕ್ಕೆ ಬೇರೆ ಕೆಲಸ ಇದೆ. ಶ್ರೀಗಂಧದ ಕಳ್ಳಸಾಗಾಣಿಕೆ ತಡೆಯಲಿ. ಈ ಕೆಲಸ ಮಾಡುವುದಕ್ಕೆ ಅವರನ್ನು ವಿಶಕ್ಕೆ ಹಚ್ಚಿದ್ದೀವಿ. ಇನ್ನು ಮುಂದೆ ನನ್ನ ತಾಲ್ಲೂಕಿನಲ್ಲಿ ಈ ರೀತಿ ತೊಂದರೆಯಾಗದಂತೆ ಆಶ್ವಾಸನೆ ಕೊಡಬೇಕೆಂದು ಕೇಳುತ್ತೇನೆ. ಅಲ್ಲಿ ಕೆಲಸ ಆಗಿಲ್ಲ. ಕಳೆದ ಮೂರು ತಿಂಗಳಲ್ಲಿ ಒಂದು ಕಿಲೋಮೀಟರ್ ರಸ್ತೆ ಕೆಲಸ ಆಗಿದ್ದರೆ ತಾವು ಹೇಳಿ ನೋಡೋಣ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ —ಸನ್ಮಾನ್ಯ ಅಧ್ಯಕ್ಷರೇ, ಅರಣ್ಯ ಅಧಿಕಾರಿಗಳು ಕಾಡಿನಲ್ಲಿರುವ ಕ್ವಾರಿ ಗಳಿಂದ ಕಲ್ಲು ತರುವಾಗ ಜೊತೆಯಾಗಿ ದಾರಿ ಮಾಡುವುದಕ್ಕೆ ಮರಗಿಡಗಳನ್ನು ಕಡಿಯುತ್ತಾರೆ ಎಂಬ ದೃಷ್ಟಿಯಿಂದ ತಡೆ ಹಿಡಿದಿದ್ದಾರು. ಮಾನ್ಯ ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡಿದ ಮೇಲೆ ಈ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಈ ಅಧಿಕಾರಿಗಳು ಲೋಕೋಪಯೋಗಿ ಇಲಾಖೆ ಅಧಿಕಾರಿ ಗಳೊಂದಿಗೆ ಚರ್ಚೆ ಮಾಡಿದ್ದಾರೆ. ಈಗ ಯಾವುದಾದರೂ ಎಲ್ಲಾ ಕ್ವಾರಿಸ್‌ನಿಂದ ಕಲ್ಲು ತರುತ್ತಿದ್ದಾರೆ. ಇನ್ನು ಮುಂದೆ ಈ ರೀತಿ ಅವ್ಯವಸ್ಥೆ ಆಗದಂತೆ ನೋಡಿಕೊಳ್ಳುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಕರ್ನಾಟಕ ಲೋಕಾ. ಯುಕ್ತದ ಬಗ್ಗೆ

೧೪೮(೫೧೭) ಶ್ರೀ ಬಿ. ಲಕ್ಷ್ಮಪ್ಪ (ಚಿಕ್ಕನಾಯಕನ ಹಳ್ಳಿ). —ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ಲೋಕಾಯುಕ್ತರು ಹಾಗೂ ಉಪ ಲೋಕಾಯುಕ್ತರು ಸರಕಾರಿ ನೌಕರರ ಹಾಗೂ ಅವರಿಗೆ ಭಾರತೀಯ ದಂಡ ಸಂಹಿತೆ (ಐ. ಪಿ. ಸಿ.) ಅನ್ವಯಿಸುವುದೇ ?